ಪವಿತ್ರ ಮಾರ್ಗದಲ್ಲಿ ಕೊಂಡೊಯ್ಯುತ್ತದೆ...ತಪ್ಪು ಮಾಡುವುದು ಮತ್ತು ತಪ್ಪನ್ನು ಒಪ್ಪಿಕೊಳ್ಳುವುದು ಇವೆರಡರಲ್ಲಿ ತಪ್ಪನ್ನು ಒಪ್ಪಿಕೊಳ್ಳದಿರುವುದು ಹೆಚ್ಚು ದೋಷದ್ದು.'

'ಬಾಪೂಜಿ...' ಮಣಿಲಾಲ ಬಿಕ್ಕಳಿಸಿದ, 'ನನ್ನ ಪಾಪಕಾರ್ಯಗಳಿಗೆ ನನಗೇ ಶಿಕ್ಷೆಯನ್ನು ಕೊಡಿ...ಲಲಿತಾ ಮತ್ತು ಚಂದಾ ಇಬ್ಬರೂ ನಿರ್ದೋಷಿಗಳು...ಅವಳ ನೀಳ ಮತ್ತು ಸುಂದರ ಕೇಶಗಳ ಮೋಹದಲ್ಲಿ ನಾನು ಕುರುಡನಾಗಿದ್ದೆ.'

ಲಲಿತಾ ಕಂಪಿಸಿದಳು. ಚಂದಾ ಸಹ ಕಂಪಿಸಿದಳು,'ಬಾಪೂ, ಮಣಿಲಾಲನಿಗೆ ಯಾವುದೇ ಶಿಕ್ಷೆಯನ್ನು ಕೊಡಬೇಡಿ...ಪಾಪ ಕಾರ್ಯವಾಗಿರುವುದು ನನ್ನಿಂದ..." ಲಲಿತಾ ಸೋತು ಹೇಳಿದಳು, "ಶಿಕ್ಷೆಯನ್ನು ನನಗೇ ಕೊಡಿ...'

ಬಾಪೂ ಅವರು ಕಣ್ಣುಗಳನ್ನು ಮುಚ್ಚಿಕೊಂಡರು. ಕೋಣೆಯಲ್ಲಿ ಮೌನ ಕವಿಯಿತು, ಅಲ್ಲಿ ನಾಲ್ಕು ಜೀವಿಗಳು ಅಲ್ಲ, ಪ್ರತಿಯಾಗಿ ನಾಲ್ಕು ವಿಗ್ರಹಗಳು ಕೂತಿವೆ ಎಂದು ಅನ್ನಿಸಿತು. 'ನಿನಗೆ ಶಿಕ್ಷೆಯನ್ನು ಕೊಡುವ ಅಧಿಕಾರ ನನಗಿಲ್ಲ,' ಸ್ವಲ್ಪ ಸಮಯದ ನಂತರ ಬಾಪೂ ಕಣ್ಣುಗಳನ್ನು ತೆರೆದರು, 'ನಿನ್ನ ಈ ವರ್ತನೆ ನನ್ನ ಅಪೂರ್ಣತೆಗೆ ಸಾಕ್ಷಿಯಾಗಿದೆ. ಈ ಅಪೂರ್ಣತೆಗಾಗಿ ನಾನೇ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ನಾನು ನಿರ್ಧಾರ ಮಾಡಿದ್ದೇನೆ...ನನ್ನ ಈ ವಿಫಲತೆಗೆ ನಾನು ಉಪವಾಸವನ್ನು ಮಾಡುತ್ತೇನೆ. ಪ್ರಭು, ಎಲ್ಲರಿಗೂ ಸದ್ಬುದ್ಧಿಯನ್ನು ಕೊಡಲಿ.' ಹೀಗೆಂದು ಬಾಪೂ ಅವರು ಮತ್ತೆ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡರು.

'ಬಾಪೂಜಿ...' ಮಣಿಲಾಲ, ಲಲಿತಾ ಮತ್ತು ಚಂದಾ ಮೂವರು ಒಟ್ಟಿಗೆ ಕಿರುಚಿದರು, 'ನೀವು...ನೀವು...ಬೇಡ, ನಾನು ಉಪವಾಸವನ್ನು ಮಾಡುತ್ತೇನೆ...ನೀವು ಹೇಳಿದಷ್ಟು ದಿನ ಮಾಡುತ್ತೇನೆ...' ಮಣಿಲಾಲ ರೋದಿಸುತ್ತಲೇ ಹೇಳಿದ.

'ಮಣಿಲಾಲ, ಉಪವಾಸ ಮಾಡುವುದರಿಂದ ಮಾತ್ರ ಮನಸ್ಸು ಪವಿತ್ರಗೊಳ್ಳುವುದಿಲ್ಲ,' ಬಾಪೂ ಸುಧಾರಿಸಿಕೊಳ್ಳುತ್ತಾ ಹೇಳಿದರು,

'ನೀನೀಗ ಈ ವಾತಾವರಣ ಮತ್ತು ಜಾಗವನ್ನೇ ತ್ಯಜಿಸಬೇಕಾಗುವುದು. ನಿನ್ನ ಮನಸ್ಸು ಮತ್ತು ದೇಹವನ್ನು ಕೆಲಸದಲ್ಲಿ ಮಗ್ನಗೊಳಿಸಬೇಕು. ಬಿಡುವಿನ ಒಂದು ಕ್ಷಣವೂ ಸಿಗಬಾರದು. ಮಣಿ, ಖಾಲಿ ಮೆದುಳು, ಸೈತಾನನ ಮನೆಯಾಗುತ್ತದೆ... ಬಿಡುವಿನಲ್ಲಿ ಮನಸ್ಸಿನಲ್ಲಿ ಕೆಟ್ಟ ವಿಚಾರಗಳು ಬರುತ್ತವೆ. ಇನ್ನು ನೀನು ಟಾಲ್‌ಸ್ಟಾಯ್ ಆಶ್ರಮದಲ್ಲಿರಲಾರೆ...'

'ಬಾಪೂ...' ಲಲಿತಾ ಗಟ್ಟಿ ಧ್ವನಿಯಲ್ಲಿ ಹೇಳಿದಳು, 'ಮಣಿಲಾಲನ ತಪ್ಪಿಲ್ಲ...ನನ್ನಿಂದಾಗಿಯೇ ಇವನು ಆ ಮಾರ್ಗದಲ್ಲಿ ಹೆಜ್ಜೆಗಳನ್ನಿಟ್ಟಿದ್ದಾನೆ ಎಂದು ನನಗೆ ಅನ್ನಿಸುತ್ತದೆ...ಶಿಕ್ಷೆಯನ್ನು ನನಗೆ ಕೊಡಿ.'

'ಶಿಕ್ಷೆ...! ಇಲ್ಲ ಇಲ್ಲ, ನಿಮ್ಮಿಬ್ಬರಿಗೆ ಶಿಕ್ಷೆ ಸಿಗಲಾರದು...ಆದರೆ...ಆದರೆ...' ಬಾಪೂ ಅವರಿಂದ ಮುಂದಕ್ಕೆ ಮಾತೇ ಹೊರಡಲಿಲ್ಲ, ಕಡೆಗೆ ಕಂಪಿಸುವ ಸ್ವರದಲ್ಲಿ ಹೇಳಿದರು, 'ಎಂದೂ, ಯಾರೂ ಸಹ ನಿಮ್ಮನ್ನು ಕೆಟ್ಟ ದೃಷ್ಟಿಯಿಂದ ನೋಡಬಾರದು, ಇದಕ್ಕಾಗಿ ನೀವು ಮೋಹದ ಮೂಲವನ್ನೇ ಕಿತ್ತೆಸೆಯಬೇಕಾಗುವುದು...'

'ಅಂದರೆ...' ಚಂದಾ ತಲೆ ಎತ್ತಿದಳು, 'ನೀವು ಹೇಳಿದಂತೆಯೇ ಕೇಳುತ್ತೇವೆ, ಬಾಪೂ. ಆದರೆ ನೀವು ಮಾತ್ರ ಉಪವಾಸವನ್ನು ಮಾಡಬೇಡಿ.'

'ಮಕ್ಕಳೇ, ಉಪವಾಸ ನನಗೆ ನನ್ನ ಅಪೂರ್ಣತೆ ಮತ್ತು ಕೊರತೆಗಳನ್ನು ಪೂರೈಸಿಕೊಳ್ಳುವ ಸಾಧನವಾಗಿದೆ, ಆದರೆ ನಾನು ನಿಮ್ಮಿಂದೇನು ಬಯಸುತ್ತೇನೆಂದರೆ...'

'ಹೇಳಿ ಬಾಪೂ, ನಿಮ್ಮಿಚ್ಛೆಯನ್ನು ಈಡೇರಿಸುತ್ತೇನೆ.' ಲಲಿತಾ ಕಣ್ಣುಗಳನ್ನು ಒರೆಸಿಕೊಂಡಳು.

'ಹಾಗಾದರೆ ಮಗಳೇ!' ಬಾಪೂ ಅವರ ತುಟಿಗಳು ಕಂಪಿಸಿದವು, ಅವರ ಮುಖದಲ್ಲಿ ನೋವಿನ ಭಾವನೆಗಳು ಮೂಡಿದವು, 'ಯಾವ ಕೇಶರಾಶಿಯ ಮೋಹದಿಂದಾಗಿ ಮಣಿಲಾಲ ತಪ್ಪನ್ನೆಸೆಗಿದನೋ, ಈ ಕೇಶರಾಶಿಯ ಆಕರ್ಷಣೆಗೊಳಗಾಗಿ ನಾಳೆ ಬೇರೊಬ್ಬ ಪಾಪದ ಕಾರ್ಯವನ್ನು ಮಾಡಬಾರದು, ಅದಕ್ಕಾಗಿ ಈ ಕೇಶರಾಶಿಯ ಮೋಹವನ್ನು ತ್ಯಜಿಸಿ. ನೀವಿಬ್ಬರು ಈ ಕೇಶರಾಶಿಯನ್ನು ಕತ್ತರಿಸಿಕೊಳ್ಳಬೇಕಾಗುವುದು...'

'ಬಾಪೂ...' ಮತ್ತೊಮ್ಮೆ ಮೂರು ದುರ್ಬಲ ಧ್ವನಿಗಳ ಕಿರುಚುವಿಕೆಯಿಂದ ಕೋಣೆಯ ಗೋಡೆಗಳು ಕಂಪಿಸಿದವು.

"ಹೌದು, ಈಗ ಇದಕ್ಕಿರುವ ಪ್ರಾಯಶ್ಚಿತ್ತ ಇದೊಂದೇ. ಮಣಿಲಾಲ ಟಾಲ್‌ಸ್ಟಾಯ್ ಆಶ್ರಮವನ್ನು ತ್ಯಜಿಸಿ ಫೀನಿಕ್ಸ್ ಆಶ್ರಮದಲ್ಲಿರಲು ಹೋಗಬೇಕು. ಅವನು ಈ ವಾತಾವರಣವನ್ನು ತ್ಯಜಿಸಿ ಹೊಸ ಕೆಲಸದಲ್ಲಿ ತೊಡಗಿದರೆ, ಅವನಿಗೆ ಪಾಪದಿಂದ ಮುಕ್ತಿ ದೊರೆಯುವುದು. ಪಾಪ ತನ್ನನ್ನು ಬಿಡುತ್ತಿಲ್ಲ ಎಂದು ಅನುಭವವಾಗದವರೆಗೆ, ಮಣಿಲಾಲ ಮದುವೆಯ ಯೋಚನೆಯನ್ನೇ ಬಿಡಬೇಕು. ಆತ್ಮದ ಉನ್ನತಿಗಾಗಿ ವೈವಾಹಿಕ ಜೀವನದ ಅಗತ್ಯವಿದೆ ಎಂಬ ವಿಶ್ವಾಸ ಮೂಡದವರೆಗೆ, ದೈಹಿಕ ಅಗತ್ಯತೆಗಳಿಗೆ ನಾನು ಮಣಿಲಾಲನ ವಿವಾಹಕ್ಕೆ ನನ್ನ ಒಪ್ಪಿಗೆಯನ್ನು ಕೊಡುವುದಿಲ್ಲ.'

ಮಣಿಲಾಲನ ಶರೀರದಲ್ಲಿದ್ದ ರಕ್ತ ಒಣಗಿದಂತಾಯಿತು. ಅವನ ಮುಖ ಒಮ್ಮೆಲೆ ಬಿಳುಪಾಯಿತು. ಅವನು ಕ್ರಮವಾಗಿ ಲಲಿತಾ ಮತ್ತು ಚಂದಾಳನ್ನು ನೋಡಿದ. ಇಬ್ಬರೂ ಬಿಕ್ಕಳಿಸುತ್ತಿದ್ದರು.

'ಮಕ್ಕಳೇ,' ಬಾಪೂ ಶಾಂತತೆಯಿಂದ ಹೇಳಿದರು, 'ಮೋಹದ ಬೇರಾದ ನಿಮ್ಮ ಕೇಶಗಳನ್ನು ತ್ಯಜಿಸಿ ನೀವು ಮತ್ತೂ ಪವಿತ್ರರಾಗುವಿರಿ. ನಿಮ್ಮ ನಡತೆಗೆ ನಾನೂ ಕಾರಣ, ಹೀಗಾಗಿ ಈ ದೋಷ ನಿವಾರಣೆಯನ್ನು ಸಹ ನಾನೇ ಮಾಡಿಕೊಳ್ಳಬೇಕು. ನಿಮ್ಮ ಕೇಶಗಳನ್ನು ನನ್ನ ಕೈಯಾರೆ ಕತ್ತರಿಯಿಂದ ಕತ್ತರಿಸಿ, ಪಾಪದ ಈ ಗಂಟನ್ನು ಕಳಚುವ ಅವಕಾಶವನ್ನು ನನಗೆ ಕೊಡಿ.'

ಇಬ್ಬರು ಕನ್ಯೆಯರು ಮೂಕವಿಸ್ಮಿತರಾದರು. ಬಾಪೂ ತಮ್ಮ ಮಾತನ್ನು ಮುಂದುವರೆಸಿದರು, 'ಇಷ್ಟಾದರೆ ನಾವೆಲ್ಲರೂ ಪ್ರಾಯಶ್ಚಿತ್ತದ ಮಾರ್ಗದಲ್ಲಿ ಹೆಜ್ಜೆಯನ್ನಿಟ್ಟಿದ್ದೇವೆ ಎಂಬ ಭಾವನೆಯಿಂದ ಹಗುರವಾಗುತ್ತೇವೆ.' ಬಾಪೂ ಅವರು ಸ್ವಲ್ಪ ತಡೆದು ಹೇಳಿದರು, 'ನಿಮಗೆ ಶಿಕ್ಷೆಯನ್ನು ಕೊಡುವುದಕ್ಕಾಗಿ ಅಲ್ಲ, ಪ್ರತಿಯಾಗಿ ನಿಮ್ಮ ಜೀವನವನ್ನು ಇನ್ನೂ ಹೆಚ್ಚು ಪವಿತ್ರಗೊಳಿಸುವುದಕ್ಕಾಗಿ... ನಿಮ್ಮ ಆತ್ಮದ ಕಲ್ಯಾಣಕ್ಕಾಗಿ, ನೀವಿಂದು ಕಹಿಉಪಚಾರವನ್ನು ನಗುನಗುತ್ತಾ ಮಾಡಿಸಿಕೊಂಡರೆ, ಪಾಪ ನಿಮ್ಮ ಜೀವನದಲ್ಲಿ ಮತ್ತೆಂದೂ ನುಸುಳುವ ಧೈರ್ಯವನ್ನು ಮಾಡಲಾರದು.' ಮಣಿಲಾಲನಿಗೆ ತಲೆಯೆತ್ತಿ ನೋಡುವ ಧೈರ್ಯ ಬರುತ್ತಿರಲಿಲ್ಲ. ಅವನು ತಲೆಯನ್ನು ತಗ್ಗಿಸಿದ. ಚಂದಾ ಮತ್ತು ಲಲಿತಾ ಸಹ ತಲೆಯೆತ್ತಿ ನೋಡದಾದರು.

'ಮಕ್ಕಳೇ, ನಾನು ಉಪವಾಸವನ್ನು ಮಾಡುತ್ತಿರುವುದು ಸಹ ನಿಮ್ಮ ಒಳಿತಿಗಾಗಿಯೇ. ನಾವೆಲ್ಲರೂ ಒಟ್ಟಾಗಿ ಪಾಪವನ್ನು ಸೋಲಿಸಬೇಕು. ಹೇಳಿ, ನಿಮ್ಮಿಂದ ಈ ಪಾಪದ ಬೇರಾದ ಕೇಶವನ್ನು ತ್ಯಜಿಸಲು ಸಾಧ್ಯವೇ?'

'ಬಾಪೂ...' ಲಲಿತಾ ಬಿಕ್ಕಿಬಿಕ್ಕಿ ಅತ್ತಳು, 'ನೀವು ಹೇಳಿದಂತೆ ಕೇಳಲು ನಾನು ಸಿದ್ಧಳಿದ್ದೇನೆ.'

'ಶಾಬಾಶ್ ಮಗಳೇ! ನನಗೆ ನಿನ್ನಂಥ ಹುಡುಗಿಯಿಂದ ಮೋಹತ್ಯಾಗದ ಇಂಥ ಅಪೇಕ್ಷೆಯಿತ್ತು.' ಬಾಪೂ ಮೆಲ್ಲನೆ ಹೇಳಿದರು.

'ಮತ್ತೆ...ಚಂದಾ ನಿನ್ನ ಅಭಿಪ್ರಾಯವೇನು?'

'ಬಾಪೂ, ಲಲಿತಾ ಮತ್ತು ನಾನು ಬೇರೆ ಬೇರೆಯಲ್ಲ. ನೀವು ಹೇಳುವುದು ನಮ್ಮ ಒಳಿತಿಗಾಗಿಯೇ.' ಚಂದಾ ಸಹ ಕಣ್ಣೀರನ್ನು ಒರೆಸಿಕೊಂಡಳು.

'ಸರಿ,' ಬಾಪೂ ಸಂತೋಷದಿಂದ ಹೇಳಿದರು, 'ಇನ್ನು ಪಾಪದ ನೆರಳು ಸಹ ನಿಮ್ಮ ಮೇಲೆ ಬೀಳಲಾರದು.' ಈಗ ಬಾಪೂ ಮಣಿಲಾಲನನ್ನು ನೋಡುತ್ತಾ ಹೇಳಿದರು, 'ಮಣಿಲಾಲ, ನೀನು ಹೋಗಿ ನಮ್ಮ ಕ್ಷೌರದ ಪೆಟ್ಟಿಗೆಯಿಂದ ದೊಡ್ಡ ಕತ್ತರಿಯನ್ನು ತೆಗೆದುಕೊಂಡು ಬಾ...ಚಂದಾ ಮತ್ತು ಲಲಿತಾಳನ್ನು ಪಾಪಮುಕ್ತಿಯ ಮಾರ್ಗಕ್ಕೆ ಕರೆದುಕೊಂಡು ಹೋಗೋಣ...'

ಮಣಿಲಾಲನ ರಕ್ತ ಹೆಪ್ಪುಗಟ್ಟಿದಂತಾಯಿತು. ಅವನು ಲಲಿತಾ ಮತ್ತು ಚಂದಾಳ ಕೇಶರಾಶಿಯನ್ನು ನೋಡಿದ. ಈ ನೀಳ, ಕಪ್ಪು ಕೇಶರಾಶಿ ಈ ಕನ್ಯೆಯರಿಗೆ ಅಪ್ಸರೆಯ ರೂಪವನ್ನು ಕರುಣಿಸುತ್ತಿದ್ದವು...ಇನ್ನು ಒಂದು ಕ್ಷಣ ಮಾತ್ರದಲ್ಲಿ ಈ ಮುಖಗಳು ಹೇಗೆ ಕಾಣಿಸುವವೋ ಎಂದು ಯೋಚಿಸಿ ಮಣಿಲಾಲ ತತ್ತರಿಸಿದ. ಬೋಳು ತಲೆಯ ಲಲಿತಾ...

'ಏಳು ಮಣಿಲಾಲ!' ಬಾಪೂ ಮತ್ತೆ ಹೇಳಿದರು.

ಮಣಿಲಾಲ ಎದ್ದು ಬಹು ಕಷ್ಟದಿಂದ ಮೊದಲು ಲಲಿತಾಳನ್ನು ನೋಡಿದ. ನಂತರ ಹೊರಳಿ ಹೊರಗೆ ಹೋದ. ಆಶ್ರಮವಾಸಿಗಳು ತಮ್ಮ ಕ್ಷೌರವನ್ನು ಪರಸ್ಪರ ಸಹಕಾರದಿಂದ, ಕೈಗಳಿಂದ ಮಾಡಿಕೊಳ್ಳುತ್ತಿದ್ದರು. ಇದಕ್ಕಾಗಿ ಅಗತ್ಯವಾದ ಸಲಕರಣೆಗಳನ್ನು ಒಂದು ಪೆಟ್ಟಿಗೆಯಲ್ಲಿಡಲಾಗಿತ್ತು. ಮಣಿಲಾಲ ಆ ಕೋಣೆಗೆ ಹೋಗಿ ಕತ್ತರಿಯನ್ನು ಹುಡುಕಿ ತಂದ.